ಕರ್ನಾಟಕ ಸರ್ಕಾರ
Government of Karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಡಿ ಎಸ್ ಇ ಆರ್ ಟಿ
DSERT
DEPARTMENT OF STATE EDUCATIONAL RESEARCH AND TRAINING
NO 4, 100 FT RING ROAD, BANASHANKARI 3RD STAGE BENGALURU - 085
Email: dsert.kar@nic.in Website : http://dsert.kar.nic.in
Phone : 080 26422372 26422373 26422374 Fax:26422377

ಸಂಖ್ಯೆ: ರಾವಿಸಂ(2)/ವಿ.ಕಾ/12 FYP/IA Proposals /2013-14 ದಿನಾಂಕ: 15.07.2013

**ಸುತ್ತೋಲೆ.**

ವಿಷಯ: 12 ನೇ ಹಣಕಾಸು ಯೊಜನೆಯಡಿಯಲ್ಲಿ ಹೊಸ INSPIRE award ಪ್ರಸ್ತಾವನೆಗಳನ್ನು ಸಲ್ಲಿಸುವ ಬಗ್ಗೆ.

*******

ವಿಷಯಕ್ಕೆ ಸಂಬಂಧಿಸಿದಂತೆ, ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು 6 ರಿಂದ 10 ನೇ ತರಗತಿ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಿ ಔದ್ಯೋಗಿಕ ಕ್ಷೇತ್ರದಲ್ಲಿ ವಿಜ್ಞಾನವನ್ನು ಆಯ್ಕೆ ಮಾಡಿಕೊಳ್ಳುವಂತೆ ಪ್ರೇರಣೆ ನೀಡಿ, ದೇಶದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ಪ್ರಾರಂಭಿಸಿರುವ INSPIRE award ಕಾರ್ಯಕ್ರಮದಲ್ಲಿ ,ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ನವದೆಹಲಿ ಇವರು ಪ್ರಾರಂಭಿಸಿರುವ INSPIRE award ಯೋಜನೆಯ ಅನುಷ್ಠಾನದಲ್ಲಿ , ಕಳೆದ ವರ್ಷ ನೀವು ಅಗತ್ಯ ಸಹಕಾರ ನೀಡಿರುತ್ತೀರಿ. 12 ನೇ ಹಣಕಾಸು ಯೋಜನೆಯಡಿಯಲ್ಲಿ ರಾಜ್ಯಕ್ಕೆ ನಿಗಧಿಯಾಗಿರುವ ಸುಮಾರು 88,000 ಅವಾರ್ಡ್‌ಗಳಲ್ಲಿ 24,000 ದಷ್ಟು ಅವಾರ್ಡ್‌ಗಳನ್ನು ಈಗಾಗಲೇ ಪಡೆದುಕೊಂಡಿದ್ದು ಉಳಿದ ಅವಾರ್ಡ್‌ಗಳನ್ನು ಪೂರ್ಣವಾಗಿ ಪಡೆಯಬೇಕಿದೆ.

ಆದ್ದರಿಂದ , ಎಲ್ಲಾ ಡಿ.ಎಸ್.ಓ ಗಳು ಹೊಸ ಪ್ರಸ್ತಾವನೆಗಳನ್ನು ಕಳುಹಿಸಲು ಕ್ರಮ ವಹಿಸುವುದು.

ಮಾಹಿತಿಯನ್ನು MS Excel format ನಲ್ಲಿಯೇ ಕಳುಹಿಸುವುದು. ಹಾಗೂ Annexure –II , ಅನ್ನು mail ಮಾಡುತ್ತಿದ್ದು ಆ ನಮೂನೆಯನ್ನೇ ಬ್ಲಾಕ್ ಹಂತಕ್ಕೆ ನೀಡಿ ಮಾಹಿತಿ ಪಡೆದುಕೊಳ್ಳುವುದು.

<u>ನಿಮ್ಮ ಜಿಲ್ಲೆಯಿಂದ ಉಳಿಕೆ ಪ್ರಸ್ತಾವನೆಗಳನ್ನು ಕಳುಹಿಸಲು ಈ ಕೆಳಕಂಡ ಅಗತ್ಯ ಕ್ರಮವಹಿಸುವುದು.</u>

1. Guidelines ಪುಸ್ತಕದಲ್ಲಿ ಪುಟಸಂಖ್ಯೆ: 10 ರಲ್ಲಿರುವ Annexure II ನಲ್ಲಿರುವಂತೆ ಪ್ರಸ್ತಾವನೆಗಳನ್ನು ಸಲ್ಲಿಸುವುದು. ಪುಟ ಸಂಖ್ಯೆ 11 ರಲ್ಲಿನ Note ಅಂಶಗಳನ್ನು ಗಮನಿಸಿ ಅದರಂತೆ ಭರ್ತಿ ಮಾಡುವುದು.

2. ಪ್ರಸ್ತಾವನೆಗಳನ್ನು ಮತ್ತೆ ಹೊಸದಾಗಿ ಪಡೆದುಕೊಳ್ಳುವುದು. ಯಾವುದೇ ಕಾರಣಕ್ಕೂ ಈ ಹಿಂದೆ ಸಲ್ಲಿಸಿದ್ದ ಪ್ರಸ್ತಾವನೆಗಳನ್ನು ಮರು ಸಲ್ಲಿಸಬಾರದು.

3. ನಲ್ಲಿ 18 ಕಾಲಂ ಗಳಿದ್ದು ಅವುಗಳನ್ನು ಭರ್ತಿ ಮಾಡುವ ಕ್ರಮ
   - 3.1) col 1 : ಒಂದು ಶಾಲೆಗೆ ಒಂದೇ ಕ್ರಮಸಂಖ್ಯೆ ನಮೂದಿಸುವುದು.
   - 3.2) col 2 : Revenue ಜಿಲ್ಲೆಯ ಹೆಸರು ನಮೂದಿಸುವುದು. ಮಧುಗಿರಿ, ಶಿರಸಿ, ಚಿಕ್ಕೋಡಿ, ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆಗಳಿಗೆ ಅನ್ವಯಿಸುತ್ತದೆ.
   - 3.3) col 3 : ಶೈಕ್ಷಣಿಕ ಜಿಲ್ಲೆಯ ಹೆಸರು ನಮೂದಿಸುವುದು.
   - 3.4) col 4: ಬ್ಲಾಕ್‌ನ ಹೆಸರು ನಮೂದಿಸುವುದು.
   - 3.5) col 5: ಶಾಲೆಯ ಪೂರ್ಣ ಹೆಸರು ನಮೂದಿಸುವುದು.
   - 3.6) col 6 : ಶಾಲೆಯ DISE ಕೋಡ್ ನಮೂದಿಸುವುದು.
   - 3.7) col 7 : no.of children selected from the school for INSPIRE award till March 31, 2013 ಎಂದು ಬದಲಾಯಿಸಿಕೊಂಡು ಒಬ್ಬ 2012-13 ನೇ ಸಾಲಿಗೆ ಒಬ್ಬ

ವಿದ್ಯಾರ್ಥಿ ಅವಾರ್ಡ್ ಪಡೆದಿದ್ದಲ್ಲಿ 1 ಎಂದು , ಇದುವರೆವಿಗೂ ಅವಾರ್ಡ್ ಪಡೆಯದಿದ್ದಲ್ಲಿ 0 ಎಂದು ನಮೂದಿಸುವುದು.

3.8) col 8 : ಶಾಲೆಯ ವಿಧ: Note-1 ರಲ್ಲಿದ್ದಂತೆ. ಈ ಆರು option ಹೊರತು ಪಡಿಸಿ ಬೇರೆ ಯಾವುದೇ ಸಂಕೇತ ಬಳಸುವಂತಿಲ್ಲ.

3.9) col 9 : Location – Note 2 ರಲ್ಲಿದ್ದಂತೆ ನಗರ ಪ್ರದೇಶಕ್ಕೆ **U**, ಗ್ರಾಮೀಣ ಪ್ರದೇಶಕ್ಕೆ **R**, ನಗರಕ್ಕೆ ಹೊಂದಿಕೊಂಡ ಪ್ರದೇಶಕ್ಕೆ **SU**. ಈ ಮೂರನ್ನು ಹೊರತುಪಡಿಸಿ ಬೇರೆ ಯಾವುದೇ ಸಂಕೇತ ಬಳಸುವಂತಿಲ್ಲ.

3.10) Col 10 :Level of the School: ಹಿರಿಯ ಪ್ರಾಥಮಿಕ ಶಾಲೆಗೆ – **M**,
ಪ್ರೌಢಶಾಲೆಗೆ – **H** . 10+2 ಶಾಲೆಗೆ – **HS**
ಕಿರಿಯ ಪ್ರಾಥಮಿಕ ಶಾಲೆಗಳು ವ್ಯಾಪ್ತಿಗೆ ಒಳಪಡದ ಕಾರಣ ಪರಿಗಣಿಸುವಂತಿಲ್ಲ.

3.11) Col 11: ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 6 ಮತ್ತು 7 ತರಗತಿಗಳಿಂದ ಪ್ರತಿ ತರಗತಿಯಿಂದ ಒಬ್ಬ ವಿದ್ಯಾರ್ಥಿ/ನಿ .
ಉನ್ನತೀಕರಿಸಿದ ಶಾಲೆಯಿಂದ 6 , 7 ಮತ್ತು 8 ನೇ ತರಗತಿಗಳಿಂದ ಪ್ರತಿ ತರಗತಿಯಿಂದ ಒಬ್ಬ ವಿದ್ಯಾರ್ಥಿ/ನಿ , ಮತ್ತು
ಪ್ರೌಢಶಾಲೆ ಮತ್ತು 10+2 ಶಾಲೆಗಳಿಂದ 8 ,9 ಮತ್ತು 10 ನೇ ತರಗತಿಗಳಿಂದ ಪ್ರತಿ ತರಗತಿಯಿಂದ ಒಬ್ಬ ವಿದ್ಯಾರ್ಥಿ/ನಿ ,
Spelling ನಲ್ಲಿ ಯಾವುದೇ ವ್ಯತ್ಯಾಸವಾಗದಂತೆ ಎಚ್ಚರ ವಹಿಸಬೇಕು.

3.12) Col 12: ತರಗತಿಗಳನ್ನು ಸಂಖ್ಯೆಯಲ್ಲಿ ನಮೂದಿಸುವುದು. ಉದಾ: 6, 7, 8..

3.13) Col 13: Preference number ನಮೂದಿಸುವುದು. ಶಾಲಾ ಮುಖ್ಯಸ್ಥರು ಆದ್ಯತೆಯ ಮೇರೆಗೆ ಸಂಖ್ಯೆಗಳನ್ನು ನಮೂದಿಸುವುದು. ಸಂಖ್ಯೆ-1 ಎಂದು ನಮೂದಾಗಿರುವ ವಿದ್ಯಾರ್ಥಿನಿಗೆ ಮೊದಲ ಹಂತದಲ್ಲಿಯೇ ಅವಾರ್ಡ್ ದೊರೆಯಲಿದೆ. ಮುಂದಿನ ವರ್ಷದಲ್ಲಿ ಶಾಲೆಯಿಂದ ಹೊರಹೋಗಲಿರುವ ವಿದ್ಯಾರ್ಥಿಗೆ ( ಉದಾ: ಮುಂದಿನ ಹಂತದ ವಿದ್ಯಾಭ್ಯಾಸಕ್ಕೆ ) Preference number -1 ನೀಡಿದ್ದಲ್ಲಿ ಹಾಗೂ ಅವಾರ್ಡ್ ತಡವಾಗಿ ಮಂಜೂರಾದಲ್ಲಿ ಆ ವಿದ್ಯಾರ್ಥಿ ಜಿಲ್ಲಾ ಹಂತದ ವಸ್ತುಪ್ರದರ್ಶನದಲ್ಲಿ ಭಾಗವಹಿಸುವಂತೆ ಮಾಡುವ ಜವಾಬ್ದಾರಿ ಮುಖ್ಯಶಿಕ್ಷಕರದ್ದಾಗಿರುತ್ತದೆ. ಯಾವುದೇ ಕಾರಣಕ್ಕೂ ವಿದ್ಯಾರ್ಥಿ ಶಾಲೆ ಬಿಟ್ಟುಹೋಗಿರುತ್ತಾರೆಂದು ಅವಾರ್ಡ್ ಹಿಂದಿರುಗಿಸುವಂತಿಲ್ಲ.

3.14) Col 14 : ಗಂಡು ಮಕ್ಕಳಿಗೆ – **M** , ಎಂದೂ ಹೆಣ್ಣು ಮಕ್ಕಳಿಗೆ – **F** ಎಂದೂ ನಮೂದಿಸಬೇಕು. ಇದನ್ನು ಹೊರತು ಪಡಿಸಿ ಬೇರೆ ಸಂಕೇತ ಬಳಸುವಂತಿಲ್ಲ.

3.15) Col 15 : ಜಾತಿ ಯನ್ನು 4 option ಗಳಲ್ಲಿ ಮಾತ್ರ ನಮೂದಿಸಬೇಕು. Note 7 ರಲ್ಲಿದ್ದಂತೆ.

3.16) Col 16 : ಕಾಲಂ ಸಂಖ್ಯೆ 11 ರಲ್ಲಿರುವ ವಿದ್ಯಾರ್ಥಿಯ ತಂದೆ/ ತಾಯಿಯ ಹೆಸರನ್ನು ಕಡ್ಡಾಯ ವಾಗಿ ನಮೂದಿಸಬೇಕು. Spelling ನಲ್ಲಿ ಯಾವುದೇ ವ್ಯತ್ಯಾಸವಾಗದಂತೆ ಎಚ್ಚರ ವಹಿಸಬೇಕು.

3.17) Col 17: ಭರ್ತಿ ಮಾಡುವಂತಿಲ್ಲ.

3.18) Col 18: ಭರ್ತಿ ಮಾಡುವಂತಿಲ್ಲ.

4. ಶಾಲಾ ಹಂತದಲ್ಲಿ ಅವಾರ್ಡ್‌ಗೆ ಆಯ್ಕೆ ಪ್ರಕ್ರಿಯೆಯನ್ನು ಈ ಹಿಂದೆ ತಿಳಿಸಿರುವಂತೆ ಪುಸ್ತಕ ಪುಟ ಸಂಖ್ಯೆ 2 ರಲ್ಲಿ 2.3, ಪುಟಸಂಖ್ಯೆ : 5 ರ 6.10.1 ಮತ್ತು 6.10.7 ರಲ್ಲಿನ ಅಂಶಗಳನ್ನು ಗಮನಿಸಿ ಕ್ರಮವಹಿಸುವುದು. ಇನ್‌ಸ್ಪೈರ್ ಅವಾರ್ಡ್ ಯೋಜನೆ, ಆಯ್ಕೆ ಪ್ರಕ್ರಿಯೆ ಕುರಿತಂತೆ ಶಾಲಾ ನೋಟಿಸ್ ಬೋರ್ಡಿನಲ್ಲಿ ಮಾಹಿತಿ ನೀಡಿ, ಪಾರದರ್ಶಕವಾಗಿ ವಿದ್ಯಾರ್ಥಿಗಳ ಆಯ್ಕೆ ಮಾಡಿಕೊಳ್ಳುವುದು.

5. ಪ್ರಸ್ತಾವನೆಗಳನ್ನು ಶಾಲಾ ಮುಖ್ಯಸ್ಥರ ದೃಢೀಕರಣದೊಂದಿಗೆ ಪಡೆದುಕೊಳ್ಳುವುದು. ಯವುದೇ ಕಾರಣಕ್ಕೂ ದೃಢಿಕೃತವಲ್ಲದ ಹೆಸರುಗಳನ್ನು ಪ್ರಸ್ತಾವನೆಯ ಪಟ್ಟಿಯಲ್ಲಿ ಸೇರಿಸುವುದು ಬೇಡ. ಪ್ರಸ್ತಾವನೆ ಸಲ್ಲಿಕೆಯಾದ ನಂತರ ಈ ಹೆಸರಿನ ವಿದ್ಯಾರ್ಥಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿಲ್ಲ, Student not found in the school ಈ ಕಾರಣದೊಂದಿಗೆ ಅವಾರ್ಡ್ ಹಿಂದಿರುಗಿಸುವಂತಿಲ್ಲ.

27/07/2013

6. ಅವಾರ್ಡ್‌ಗಳನ್ನು ದಿನಾಂಕ: 20.07.2013 ರ ಒಳಗಾಗಿ ಈ ಕಚೇರಿಗೆ ಇ- ಮೇಲ್ ಮುಖೇನ ಸಲ್ಲಿಸಲು ಕ್ರಮವಹಿಸುವುದು. ಕಳುಹಿಸಿದ ಮಾಹಿತಿ ಸರಿಯಾಗಿದೆಯೆಂದು ಈ ಕಚೇರಿಯಿಂದ ಖಾತ್ರಿ ಪಡಿಸಿದ ನಂತರ ಸಿ.ಡಿ. ಮತ್ತು ದೃಢೀಕೃತ ಹಾರ್ಡ್ ಕಾಪಿ ಕಳುಹಿಸುವುದು.

7. ಯಾವುದೇ ಕಾರಣಕ್ಕೂ ಈ ಹಿಂದೆ ( ಕಳೆದ 11 ನೆ ಹಣಕಾಸು ಯೋಜನೆಯಡಿಯಲ್ಲಿಯೂ ) ಯಾವುದೇ ಹಂತದಲ್ಲಿ ಅವಾರ್ಡ್ ಪಡೆದ ವಿದ್ಯಾರ್ಥಿಯ ಹೆಸರನ್ನು ಮತ್ತೆ ಪ್ರಸ್ತಾಪಿಸುವಂತಿಲ್ಲ. ಕಾರಣ INSPIRE award ನ SEAT ( Scheme early attraction of talents ) ಒಂದು ವಿದ್ಯಾರ್ಥಿಗೆ ಒಮ್ಮೆ ಮಾತ್ರ ನೀಡುವ ಯೋಜನೆಯಾಗಿದೆ. ಇತರೆ ಅರ್ಹ ವಿದ್ಯಾರ್ಥಿಗಳು ಈ ಅವಕಾಶದಿಂದ ವಂಚಿತರಾಗುವುದು ಬೇಡ.

8. Guidelines ಪುಸ್ತಕದಲ್ಲಿ ಪುಟಸಂಖ್ಯೆ: 12 ಮತ್ತು 13 ರಲ್ಲಿ ಭರ್ತಿ ಮಾಡುವ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಿದ್ದು ಅದರಂತೆ ಕ್ರಮಹಿಸುವುದು.

9. ವಿದ್ಯಾರ್ಥಿಯ ಹೆಸರು, ತಂದೆ/ ತಾಯಿ ಯ ಹೆಸರು , ಶಾಲೆಯ ಹೆಸರು ತಪ್ಪಿಲ್ಲದಂತೆ ನಮೂದಿಸುವುದು. ತಂದೆ ಅತವಾ ತಾಯಿಯ ಹೆಸರು ನಮೂದಿಸುವುದು ಕಡ್ಡಾಯವಾಗಿರುತ್ತದೆ. ವಾರಂಟ್‌ಗಳ ತಿದ್ದುಪಡಿ ಡಿ.ಎಸ್.ಟಿ.. ನವದೆಹಲಿಗೆ ಇಲ್ಲಿಯೇ ಆಗಬೇಕಿದ್ದು ಇದು ಸಾಕಷ್ಟು ಸಮಯ ತೆಗೆದುಕೊಳ್ಳುತ್ತದೆ. ಆದ್ದರಿಂದ ಸಾಕಷ್ಟು ಮುಂಜಾಗ್ರತೆ ವಹಿಸಿ ತಪ್ಪಿಲ್ಲದಂತೆ ಪ್ರಸ್ತಾವನೆಗಳನ್ನು ಕಳುಹಿಸುವುದು.

10. ಮಾದರಿ ಪ್ರಸ್ತಾವನೆಯನ್ನು ಲಗತ್ತಿಸಿದೆ.

ನಿರ್ದೇಶಕರು
(ಸಂ & ತ)

ಗೆ
ಪ್ರಾಂಶುಪಾಲರು
______________ ಡಯಟ್